ಪಿಡಬ್ಲ್ಯೂ-1

**<u>ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ದಿನಾಂಕಃ 28-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ ವಿ.ಎ.ಜಿ.ಹೆಚ್. ಆರೋಪಿ ಪರ ವಕೀಲರಿಂದಃ</u>**

**1.** ನಾನು ಎಸ್.ಎಸ್.ಎಲ್.ಸಿ. ವರೆಗೆ ಓದಿರುತ್ತೇನೆ. ಎಸ್.ಎಸ್.ಎಲ್.ಸಿ. ಆದ ತಕ್ಷಣ ನಾನು ಸ್ವಂತ ಹೋಟೆಲ್ ನಡೆಸುತ್ತಿದ್ದೇನೆ. ಆರೋಪಿಯು ನನಗೆ ಪರಿಚಯಸ್ಥರು. ಅವರು ನನ್ನ ಸಂಬಂಧಿಕರಲ್ಲ ಮತ್ತು ಸಹಪಾಠಿ ಅಲ್ಲ. ಆತನು ಹಾವೇರಿ ತಾಲ್ಲೂಕ ದೇವಿಹೊಸೂರ ಗ್ರಾಮದ ಖಾಯಂವಾಸಿಯಾಗಿದ್ದಾನೆ ಎಂದರೆ ಸರಿ. ನಾನು ನಗರಸಭೆ ಕಾಂಪ್ಲೆಕ್ಸದಲ್ಲಿ ಹೋಟೆಲ ಹೊಂದಿದ್ದ ಬಗ್ಗೆ ಸಂಬಂಧಪಟ್ಟ ಪರವಾನಿಗೆ ಪತ್ರ ಅಥವಾ ಇತರೆ ದಾಖಲೆಗಳನ್ನು ಹಾಜರು ಮಾಡಿಲ್ಲ. ಸದ್ರಿ ದಾಖಲೆಗಳನ್ನು ಹಾಜರು ಮಾಡಲು ನನಗೆ ತೊಂದರೆ ಇಲ್ಲ. ನನ್ನ ಮೇಲೆ ರೂ. 5,00,000/- ಗಳ ಒಂದು ಚೆಕ್ ಚೌನ್ಸ ಪ್ರಕರಣ ದಾಖಲಾಗಿದ್ದು,ಅದು ಇನ್ನು ಚಾಲ್ತಿಯಲ್ಲಿದೆ. ಆರೋಪಿಯು ನನ್ನ ಬಳಿ ರೂ. 4,00,000/- ಗಳನ್ನು ಪಡೆದುಕೊಂಡಿರುತ್ತಾನೆ ಎನ್ನುವ ಬಗ್ಗೆ ಲಿಖಿತ ದಾಖಲೆ ಅಂದರೆ ಕರಾರು ಪತ್ರ ಇಲ್ಲ. ಸಾಕ್ಷಿಯು ಮುಂದುವರೆದು ಚೆಕ್ ಇದೆ ಎಂದು ನುಡಿಯುತ್ತಾರೆ.

**2.** ಜನೆವರಿ-2018 ರಿಂದ ಡಿಸೆಂಬರ-2018 ರವರೆಗೆ ನನ್ನ ಬಳಿ ರೂ.4,00,000/- ಹಣ ಇತ್ತು ಎನ್ನುವುದಕ್ಕೆ ದಾಖಲೆ ಇಲ್ಲ. 2018 ನೇ ಇಸ್ವಿಯಲ್ಲಿ ನನ್ನ ಬಳಿ ರೂ.4,00,000/- ಹಣ ಇರಲೇ ಇಲ್ಲ, ಆರೋಪಿಗೆ ನಾನು ಸದ್ರಿ ರೂ. 4,00,000/- ಹಣ ಕೊಟ್ಟಿರುತ್ತೇನೆಂದು ಖೊಟ್ಟಿ ದಾಖಲೆ ಸೃಷ್ಠಿ ಮಾಡಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಆದಾಯ ತೆರಿಗೆ ಪಾವತಿ ಮಾಡುವುದಿಲ್ಲ. ನಮ್ಮ ಕುಟುಂಬಕ್ಕೆ ಎಪಿಎಲ್ ಕಾರ್ಡ ಇದೆ. ಅದನ್ನು ಹಾಜರು ಪಡಿಸಲು ನನಗೆ ತೊಂದರೆ ಇಲ್ಲ. ನನಗೆ ಸಮರ್ಪಕ ಉದ್ಯೋಗ ಇಲ್ಲ ಮತ್ತು ಅಷ್ಟು ಮೊತ್ತದ ಹಣ ನೀಡುವ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ದಿನಾಂಕಃ 15-02-2018 ರಂದು ನಾನು ಆರೋಪಿಗೆ ರೂ. 4,00,000/- ಕೊಟ್ಟ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ ಸಾಕ್ಷಿಯು ದಾಖಲೆ ಇಲ್ಲ ಆದರೆ ಸಾಕ್ಷಿಗಳ ಮುಂದೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸದ್ರಿ ಹಣವನ್ನು ಕೊಡುವಾಗ ಇಬ್ಬರು ಸಾಕ್ಷಿಗಳು ಇದ್ದರು. ಬಸವರಾಜ

ಹಳ್ಳಿಕೇರಿ ಮತ್ತು ಶಂಭುಲಿಂಗ ಹಾವೇರಿ ಎನ್ನುವವರು ಇದ್ದರು. ಸದ್ರಿಯವರುಗಳಿಬ್ಬರೂ ಯಾಲಕ್ಕಿ ಓಣಿ, ಹಾವೇರಿಯವರು. ಇಬ್ಬರ ಸಮಕ್ಷಮ ಹಣ ಕೊಟ್ಟಿರುತ್ತೇನೆ ಎನ್ನುವ ವಿಚಾರವನ್ನು ಪಿರ್ಯಾದಿಯಲ್ಲಾಗಲೀ, ನೋಟಿಸನ್ನಾಗಲಿ ಅಥವಾ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಾಗಲೀ ನಮೂದಿಸಿಲ್ಲ. ಬಸವರಾಜ ಮತ್ತು ಶಂಭುಲಿಂಗ ಇವರುಗಳ ಸಮಕ್ಷಮ ರೂ. 4,00,000/- ಆರೋಪಿಗೆ ಕೊಟ್ಟಿರುತ್ತೇನೆಂದು ಖೊಟ್ಟಿಯಾಗಿ ಸುಳ್ಳು ಸೃಷ್ಠಿ ಮಾಡಿ ಹೇಳಿರುತ್ತೇನೆ ಎಂದರೆ ಸರಿಯಲ್ಲ.

**3.** ಆರೋಪಿ ತನ್ನ ಸಹಿ ಮಾಡಿದ ಖಾಲಿ ಚೆಕ್‌ನ್ನು ಬಸವರಾಜ ಹಳ್ಳಿಕೇರಿ, ಯಾಲಕ್ಕಿ ಓಣಿ ಎಂಬುವವರಿಗೆ ರೂ. 30,000/- ಗಳ ಕೈಗಡ ಸಾಲಕ್ಕೆ ಭದ್ರತೆಗಾಗಿ ನೀಡಿದ್ದ ಎಂದರೆ ಸರಿಯಲ್ಲ. ಆರೋಪಿಯು ಬಸವರಾಜರವರಿಗೆ ನೀಡಿದ ಖಾಲಿ ಚೆಕ್ ನ್ನು ನಾನು ಮತ್ತು ಬಸವರಾಜ ಸೇರಿಕೊಂಡು ದುರುಪಯೋಗ ಮಾಡಿ ನನ್ನ ಖಾತೆಗೆ ಜಮಾ ಮಾಡಲು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಬಸವರಾಜ ಹಳ್ಳಿಕೇರಿರವರ ಮೇಲೆ ಸಾಕಷ್ಟು ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣ ದಾಖಲಾಗಿರುತ್ತವೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದ್ರಿಯವರು ಮಸಾಲೆ, ತೆಂಗಿನಕಾಯಿ ವ್ಯಾಪಾರ ಹೀಗೆ 4-5 ವ್ಯಾಪಾರ ಮಾಡುತ್ತಾರೆ. ಸದ್ರಿಯವರು ಅನಧೀಕೃತವಾಗಿ ಲೇವಾದೇವಿ ವ್ಯವಹಾರ ಮಾಡುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ಲೇವಾದೇವಿ ವ್ಯವಹಾರದಲ್ಲಿ ಬಸವರಾಜ ತೆಗೆದುಕೊಂಡಂತಹ ಖಾಲಿ ಚೆಕ್‌ನ್ನು ದುರುಪಯೋಗಪಡಿಸಿಕೊಂಡು ನಾನು ಮತ್ತು ಆತ ಶಾಮೀಲಾಗಿ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ.

**4.** ನಾನು ನಿಪಿ-1 ನ್ನು ಎರಡು ಬಾರಿ ಬ್ಯಾಂಕಗೆ ಹಾಜರುಪಡಿಸಿದಾಗ ಕೋವಿಡ ಸಾಂಕ್ರಾಮಿಕ ರೋಗದ ನಿಮಿತ್ತ ದೇಶಾದ್ಯಂತ ಲಾಕಡೌನ್ ಘೋಷಣೆಯಾಗಿತ್ತು ಎಂದರೆ ಸಾಕ್ಷಿಯು ಆ ಸಮಯದಲ್ಲಿ ಲಾಕಡೌನ್ ಕ್ಲೀಯರ್ ಆಗಿತ್ತು ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿರತಕ್ಕಂತಹ ಬರವಣಿಗೆ ಮತ್ತು ಸಹಿ ಬೇರೆ ಬೇರೆ ಇಂಕ್ ಗಳಿಂದ ಮಾಡಲಾಗಿರುತ್ತದೆ ಎಂದರೆ ಸಾಕ್ಷಿಯು ಆರೋಪಿಯು

ಬೇರೆಯವರಿಂದ ಬರೆಯಿಸಿಕೊಟ್ಟಿದ್ದು ಸಹಿಯನ್ನು ನನ್ನ ಪೆನ್‌ನಿಂದಲೇ ಮಾಡಿರುತ್ತೇನ ಎಂದು ನುಡಿಯುತ್ತಾರೆ. ಯಾರಿಂದ ಬರೆಸಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ಎದುರಿಗೆ ಒಬ್ಬರು ಸಂಬಂಧಿಕರು ಇದ್ದರು ಅವರಿಂದ ಬರೆಯಿಸಿಕೊಟ್ಟಿರುತ್ತಾರೆ, ಅವರು ಯಾರು ಎಂದು ಈಗ ನನಗೆ ಹೇಳಲು ಆಗುವುದಿಲ್ಲ. ಆ ರೀತಿ ನಾನು ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

( ಈ ಹಂತದಲ್ಲಿ ಆರೋಪಿ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)**

ಓ ಹೇ ಕೇ ಸರಿ ಇದೆ.

-ಸಹಿ-

1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.